# ಓದು ನಿಮ್ಮ ದಿನಚರಿಯ ಭಾಗವಾಗಲಿ



**ಅನೇಕ ಬಾರಿ ವಸ್ತು ವಿಷಯ ಒಂದೇ ಆದರೂ ಕೂಡ ಒಂದೊಂದು ಪತ್ರಿಕೆಯವರು ಅದನ್ನು ಒಂದೊಂದು ರೀತಿಯಲ್ಲಿ ಓದುಗರೆದುರು ಪ್ರಸ್ತುತ ಪಡಿಸುತ್ತಾರೆ. ವರದಿಯಲ್ಲಿನ ಪದಗಳನ್ನು ಕಟ್ಟುವ ರೀತಿ, ಚಿತ್ರ ಮತ್ತು ವರದಿಯನ್ನು ವಿನ್ಯಾಸಗೊಳಿಸುವ ಪರಿ ಇವು ವಿಷಯದಷ್ಟೇ ಮುಖ್ಯವಾಗುತ್ತದೆ.**

**■ ಚಂದ್ರಶೇಖರ ಹೊಡಬಟ್ಟೆ**

ಸ್ನೇಹಿತನ ಮನೆಯ ಗೇಟಿನಲ್ಲಿಯೇ ತಂದೆ ಮಗಳ ಸಮರ ತಾರಕಕ್ಕೇರಿದ ಸುಳಿವು ನನಗೆ ಸಿಕ್ಕಿತ್ತು. ಗೇಟ್ ತೆಗೆದು ಸೋಫಾ ಹಾಕಿದ್ದ ಹಜಾರಕ್ಕೆ ಹೋದರೂ ನನ್ನ ಇರುವನ್ನು ಲೆಕ್ಕಿಸದೇ ಮುಂದುವರೆದಿತ್ತು ಅವರ ವಾಗ್ಯುದ್ಧ–ಪಟ್ಟು ಬಿಡದ ಕಾಳಗದ ಜಟ್ಟಿಯರಂತೆ. ತಂದೆಯ ಸಿಟ್ಟಿನ ಮಾತು, ಅದಕ್ಕೆ ಮಗಳು ಅಳುತ್ತಾ ಕೊಡುತ್ತಿದ್ದ ಕೋಪದ ಉತ್ತರ. ಅವರಿಬ್ಬರಲ್ಲಿ ಯಾರ ಪಂಗಡಕ್ಕೆ ಸೇರಿಕೊಳ್ಳಲಿ ಎಂಬುದು ಅರ್ಥವಾಗದೇ ದೂರದಲ್ಲಿ ಆತಂಕದಿಂದ ನಿಂತಿದ್ದ ಮನೆಯ ಯಜಮಾನಿ. ಈ ಮಧ್ಯದಲ್ಲಿ ಅನಿರೀಕ್ಷಿತ ಅಭ್ಯಾಗತನಾಗಿ ಹೋದ ನಾನು.

ಸ್ವಲ್ಪ ಹೊತ್ತಿನ ನಂತರ ವಾತಾವರಣ ತಿಳಿಯಾದಾಗ ತಿಳಿದು ಬಂದಿದ್ದಿಷ್ಟು:

ಮಗಳು ಬುದ್ಧಿವಂತೆ. ಸಾಕಷ್ಟು ರೂಪವಂತೆ. ಓದಿನಲ್ಲಿ ಸದಾ ಮುಂದು. ಕಾಲೇಜಿನ ರ್‍ಯಾಂಕಿಂಗ್ ಪಟ್ಟಿಯಲ್ಲಿ ಮೊದಲ ಮೂರು ಸ್ಥಾನಗಳಲ್ಲಿ ಯಾವಾಗಲೂ ಒಂದು ಸ್ಥಾನ ಖಾಯಂ. ಜೊತೆಗೆ ಸ್ವಲ್ಪ ಹಠಮಾರಿತನ.

ಪದವೀಧರರಾದ ತಂದೆ ರಾಜ್ಯ ಸರ್ಕಾರಿ ನಿವೃತ್ತ ನೌಕರರು. ಶಿಸ್ತುಬದ್ಧ ಜೀವನ. ಕೌಟುಂಬಿಕ ಜೀವನದಲ್ಲಿ ನೆಮ್ಮದಿಯನ್ನು ಕಂಡವರು. ಜೊತೆಗೆ ವರ್ತಮಾನದ ಆಗು–ಹೋಗುಗಳಿಗೆ ತಮ್ಮನ್ನು ತಾವು ತೆರೆದುಕೊಂಡವರು. ಅನೇಕ ಸಂಘ ಸಂಸ್ಥೆಗಳ ಒಡನಾಟ ಹಾಗೂ ವಿಸ್ತೃತವಾದ ಓದಿನಿಂದ ವರ್ತಮಾನದ ವಿದ್ಯಮಾನಗಳನ್ನು ಚರ್ಚಿಸುವ ಮಟ್ಟಿಗಿನ ಬೌದ್ಧಿಕ ಶ್ರೀಮಂತಿಕೆ ಅವರದ್ದು.

ಆದರೆ ಮಗಳ ಸ್ವಭಾವ ಅದಕ್ಕೆ ತದ್ವಿರುದ್ಧ. ಬರೀ ಕಾಲೇಜಿನ ಓದು. ಬಿಟ್ಟರೆ ಟಿ.ವಿ, ಮೊಬೈಲು. ದಿನಪತ್ರಿಕೆಗಳ ಮೇಲೆ ಕಣ್ಣಾಡಿಸಲೂ ಅಲರ್ಜಿ. ಓದಿನ ಜೊತೆಗೆ ಸ್ವಲ್ಪವಾದರೂ ಲೌಕಿಕ ಜ್ಞಾನವನ್ನು ಬೆಳೆಸಿಕೊಳ್ಳಲಿ ಎಂಬುದು ತಂದೆಯ ಒತ್ತಾಸೆ. ಮನೆಗೆ ಬರುವ ದಿನಪತ್ರಿಕೆಗಳ ಮೇಲೆ ಒಂದೈದು ನಿಮಿಷವಾದರೂ ಕಣ್ಣಾಡಿಸಲಿ ಎಂಬ ಆಶಯ. ಪರೀಕ್ಷೆಗೆ ಬೇಕಾದ ಪುಸ್ತಕದ ಜ್ಞಾನದ ಜೊತೆಗೇ ಕಿಂಚಿತ್ತಾದರೂ ಹೊರ ಪ್ರಪಂಚಕ್ಕೆ ಕಣ್ಣು ಕಿವಿ ತೆರೆದಿರಲಿ ಎಂಬ ಕಳಕಳಿ. ಇದೇ ವಿಷಯಕ್ಕೆ ವಾರಕ್ಕೊಮ್ಮೆಯಾದರೂ ಮನೆಯಲ್ಲಿ ಕುರುಕ್ಷೇತ್ರ.

ಹೌದು, ಇದು ನನ್ನ ಸ್ನೇಹಿತನ ಮನೆಯದೊಂದೇ ಕಥೆಯಲ್ಲ. ಹೆಚ್ಚಿನ ಮನೆಗಳ ವ್ಯಥೆಯೂ ಕೂಡಾ. ಹೆಚ್ಚಿನ ಹದಿಹರೆಯದವರಿಗೆ ಮತ್ತು ವಿದ್ಯಾರ್ಥಿಗಳಿಗೆ ಇತ್ತೀಚಿನ ವರ್ಷಗಳಲ್ಲಿ ವಿದ್ಯಾಭ್ಯಾಸದ ಹೊರತಾಗಿನ ಓದು ಏಕೋ ಏನೋ ಒಂದು ಕ್ಲೀಷೆಯಾಗುತ್ತಿದೆ. ಶಾಲಾ ಕಾಲೇಜಿನ ಓದಿನಲ್ಲಿ ಮುಂದಿರುವುದೇ ಒಂದು ದೊಡ್ಡಸ್ಥಿಕೆಯಾಗಿ ಬೇರೆಲ್ಲಾ ನಗಣ್ಯವಾಗಿದೆ. ಹಿರಿಯರ ಹಿತವಚನ, ಅನುಭವಿಗಳ ಮಾತಿಗೆ ಅವರು ಕೊಡುವುದು ಕವಡೆ ಕಾಸಿನ ಬೆಲೆ.

ತಂತ್ರಜ್ಞಾನದ ಉತ್ತುಂಗ ಮತ್ತು ಕಾಲದೊಂದಿಗಿನ ನಮ್ಮ ಪೈಪೋಟಿಯ ಓಟ ನಮ್ಮ ಜೀವನ ಕ್ರಮವನ್ನು ಮಾತ್ರವಲ್ಲದೇ ನಮ್ಮ ಆಲೋಚನಾ ಕ್ರಮವನ್ನೂ ನಿರ್ದೇಶಿಸುತ್ತಿದೆ ಎಂಬುದು ನಮಗೆ ಗೊತ್ತಿಲ್ಲದೆಯೇ ಮೌನವಾಗಿ ನಮ್ಮೊಳಗೇ ನಮ್ಮನ್ನು ಸುಡುತ್ತಿರುವ ಲಾವಾರಸ. ಹೊಸದನ್ನು ಅಪ್ಪಿಕೊಳ್ಳುವ ಭರದಲ್ಲಿ ಅನುಭವಕ್ಕೆ ದಕ್ಕಿದ ಪರಂಪರಾಗತವಾಗಿ ಬಂದ ಒಳ್ಳೆಯದನ್ನು ತಿರಸ್ಕರಿಸುತ್ತಿರುವುದರಿಂದ ಆಗುವ ನಷ್ಟಕ್ಕೆ ನಾವೇ ಭಾಜನರು. ಇದೇ ತಲೆತಲಾಂತರಗಳ ಅಂತರಕ್ಕೆ ಕಾರಣವಾಗಿ ಹಿರಿಯ–ಕಿರಿಯರ ಸಂಘರ್ಷದ ಜೀವನಕ್ಕೆ ನಾಂದಿಯಾಗುತ್ತಿದೆ.

ಓದು, ಉದ್ಯೋಗಕ್ಕೊಂದು ರಹದಾರಿಯಾದರೂ ಉದ್ಯೋಗದ ಓದೇ ಒಂದು ಓದಲ್ಲ. ಜೀವನೋಪಾಯಕ್ಕಾಗಿ ಒಂದು ಉದ್ಯೋಗ ಹಾಗೂ ಆಯಾ ಉದ್ಯೋಗಕ್ಕಾಗಿ ನಿಗದಿ ಪಡಿಸಿದ ವಿದ್ಯೆ ಒಂದು ತಳಪಾಯವೇ ಹೊರತು ಅದೇ ಜೀವನದ ಪರಿಪೂರ್ಣತೆಯಲ್ಲ. ಜೀವನದಲ್ಲಿ ಪರಿಪೂರ್ಣತೆಯನ್ನು ದಕ್ಕಿಸಿಕೊಳ್ಳುವ ಅನೇಕ ಪರಿಕರಗಳಲ್ಲಿ ಓದೂ ಒಂದು. ಬಹುಶಃ ಇದನ್ನು ಮನಗಂಡೇ ನನ್ನ ಸ್ನೇಹಿತರು ಮಗಳಿಗೆ ಪುಸ್ತಕದಾಚೆಗಿನ ಓದಿನ ಮಹತ್ವವನ್ನು ಹೇಳಿದ್ದಿರಬೇಕು.

ಪ್ರತಿದಿನ ದಿನಪತ್ರಿಕೆ, ವಾರಪತ್ರಿಕೆಗಳಿಗೆ ಮೀಸಲಿಡುವ ಅರ್ಧ ಗಂಟೆಯ ಸಮಯ, ನಿಜವಾಗಿಯೂ ಮಕ್ಕಳ, ವಿದ್ಯಾರ್ಥಿಗಳ ಬೆಳವಣಿಗೆಗೆ ಒಂದು ಮೌನ ಸಂಜೀವಿನಿ. ಅದರಲ್ಲಿ ಪ್ರಕಟವಾಗುವ ದೇಶ ವಿದೇಶಗಳ ರಾಜಕೀಯ, ಸಾಮಾಜಿಕ, ಔದ್ಯೋಗಿಕ ವಿಷಯಗಳು, ತಂತ್ರಜ್ಞಾನ ಮತ್ತು ವೈದ್ಯಕೀಯ ಕ್ಷೇತ್ರಗಳಲ್ಲಿನ ಹೊಸ ಹೊಸ ಸಂಶೋಧನೆಗಳು, ಕ್ರೀಡಾಲೋಕದ ರೋಮಾಂಚಕ ಘಟನಾವಳಿಗಳು, ಜೀವನದಲ್ಲಿ ಸೀಮಿತ ಅವಕಾಶವಿದ್ದೂ ಸಾಧನೆಯ ಮೇರು ಪರ್ವತವನ್ನು ಏರಿದವರು, ಇದನ್ನು ಓದಿ ಪ್ರಭಾವಿತರಾಗಿ ಹೆಚ್ಚಿನದನ್ನು ಸಾಧಿಸಿದ ಇನ್ನಿತರ ಸಾಧಕರು– ಹೀಗೆ ಓದುವುದರಿಂದ ಆಗುವ